ಎತ್ತಿ ತಿರಾಗ್ಯಾಡ್ತಾರ. ಇಲ್ಲಾಂದ್ರ ಏನಾಗ್ತದ ನೋಡೀರಿಲ್ಲೋ! ಎರಡೆರಡು ದಿನಕ್ಕೊಮ್ಮೆ ಸಣ್ಣ ಸಣ್ಣ ಮಕ್ಕಳ್ನ ರೇಪ್ ಮಾಡಿ ಕೊಂದು ಒಗ್ಯೋ ಹರಾಮಖೋರ ಹಲ್ಕಟ್ ಮಂದಿ ಬಗ್ಗೆ ಓದಿ ನನ್ನ ರಕ್ತಾ ಕೊತಕೊತ ಕುದೀತದ. ಆ ಥರಾ ಕಂಡ ಕಂಡ ಹೆಣ್ಣಮಕ್ಕಳ ಬಾಳೇವು ಹಾಳು ಮಾಡೋ ಬದ್ಲಿ ನಮ್ಮಂಥಾ ದಂಧೆ ಮಾಡೋ ಹೆಂಗಸರ್ನ ಹುಡಿಕ್ಕೊಂಡು ಬರ್ಲಿಕ್ಕೆ ಏನ ಧಾಡಿ ಈ ನನ್ನ ಮಕ್ಕಳಿಗೆ?''

ನನ್ನ ಸಹೋದ್ಯೋಗಿಗಳೇ ಇಂಥದೊಂದು ಚರ್ಚೆಯನ್ನು ಹುಟ್ಟುಹಾಕಿದ್ದರೆ ಅತ್ಯಂತ ಉತ್ಸಾಹದಿಂದ ಭಾಗವಹಿಸುತ್ತಿದ್ದೆನೇನೋ! ವಾದಗಳನ್ನು ಮಂಡಿಸಲು, ವಿರೋಧಿ ವಾದಗಳನ್ನು ತಳ್ಳಿಹಾಕಲು, ತರ್ಕಗಳನ್ನು ಹೆಣೆಯಲು ನಾನು ಕಾತುರಳಾಗುತ್ತಿದ್ದೆ. ಬುದ್ಧಿಯ ತರ್ಕಗಳು, ಮನಸ್ಸಿನ ಭಾವನೆಗಳೊಡನೆ ಸಂಘರ್ಷವಾಗಿ ವಾದಗಳನ್ನು ಬೆಳೆಸುವ ಭಾಷೆ ಹದಗೊಂಡು ಬರುತ್ತಿತ್ತು. ಇವಳ ಜೊತೆ ಚರ್ಚೆಗಿಳಿಯಲು ಮನಸ್ಸು ತಯಾರಿಲ್ಲ. ಆದರೆ, ಅವಳ ಅನುಭವದ ಮಾತುಗಳು ನನ್ನ ಅಹಂನ ಗೋಡೆಯನ್ನು ಒದ್ದು ಅರಿವಿನ ಒಳಪದರವನ್ನು ಸ್ಪರ್ಶಿಸಲು ತವಕಿಸುತ್ತಿದ್ದವು. ``ಹೂಂ, ಹೂಂ'' ಎಂದಷ್ಟೇ ಹೇಳಲು ನನಗೆ ಸಾಧ್ಯವಾದದ್ದು. ಅವಳಿಗೆ ಇನ್ನೂ ಮಾತು ಮುಂದುವರೆಸಲು ಬಿಟ್ಟರೆ ಒಂದು ತಾಸು ಕೊರೆದಾಳು. ಮಕ್ಕಳು ಮತ್ತು ಆಕಾಶ ಬರುವಷ್ಟರಲ್ಲಿ ನನ್ನ ಅಡುಗೆ ಆಗಬೇಕಿದೆ. ನನ್ನ ನಿರುತ್ಸಾಹ ಅವಳಿಗೆ ಗೊತ್ತಾಯ್ತೋ ಇಲ್ಲವೋ! ಇನ್ನೂ ಒಂದಿಷ್ಟು ಮಾತಾಡಿ ಅವಳು ತನ್ನ ವ್ಯಾನಿಟಿ ಬ್ಯಾಗಿನಿಂದ ಚೆಕ್ ಒಂದನ್ನು ಹೊರತೆಗೆದಳು. ``ಅಕ್ಕಾ, ಇದನ್ನು ಯಾರ ಹೆಸರಿಗೆ ಬರೀಬೇಕು ನೋಡ್ರಿ. ನಾನು ನನ್ನ ಮುಂದಿನ ಜೀವನಕ್ಕ ಸಾಕಾಗೋವಷ್ಟು ಇಟಗೊಂಡೇ ಕೊಡ್ತೇನಿ'' ಎಂದಳು.

ಅವಳ ಈ ಉದಾರ ಬುದ್ಧಿಯನ್ನು ಕಂಡು ನನ್ನ ಮನಸ್ಸು ನಿಧಾನಕ್ಕೆ ಕರಗಲಾರಂಭಿಸಿತ್ತು. ಪಾಪ ಒಳ್ಳೆಯ ಹುಡುಗಿ. ಹುಡುಗಿಯಲ್ಲ, ಹೆಂಗಸು. ಮದುವೆಯಿಲ್ಲ, ಮಕ್ಕಳಿಲ್ಲ, ಹಾಗಾಗಿ ನಮ್ಮಂಥವರ ಬಾಯಲ್ಲಿ ಹುಡುಗಿಯೆಂದೇ ಬರುತ್ತದೆ. ಚೆಕ್ ತೆಗೆದುಕೊಂಡು ಯೋಚಿಸುತ್ತ ಕೂತೆ. ಯಾರಿಗೆ ಕೊಡಬಹುದು? ಅಷ್ಟಕ್ಕೂ ಎಷ್ಟು ಕೊಡುತ್ತಾಳೆ ಇವಳು? ಅವಳು ಬರೆದಿಲ್ಲ, ನಾನೂ ಕೇಳಿಲ್ಲ ಇನ್ನೂ. ಬರೀ ಸಹಿ ಮಾಡಿದ ಬ್ಲ್ಯಾಂಕ್ ಚೆಕ್! ಅವಳೆಡೆಗೆ ನೋಡಿದೆ. ``ಯಾರ ಹೆಸರಿಗೆ ಕೊಡಬಹುದು ವಿಚಾರಿಸಿ ನೋಡ್ತೇನಿ. ಪ್ರಾಮಾಣಿಕವಾಗಿ ಅವಶ್ಯಕತೆ ಇದ್ದವ್ರಿಗೆ ಕೊಡೋ ಅಂಥಾ ಸಂಸ್ಥೆ ಯಾವುದಾದ್ರೂ ಇದ್ರ ನೋಡ್ತೇನಿ'' ಎಂದೆ. ``ರೊಕ್ಕ ಎಷ್ಟು ಬರೀಲಿ?'' ``ಸದ್ಯ ಐದು ಲಕ್ಷ ಬರೀ ಅಕ್ಕಾ. ಮತ್ತ ಸಾಧ್ಯಾದ್ರ ಮತ್ತ ಕೊಟ್ರಾತು'' ಎಂದವಳು ಬಾಗಿಲು ತೆರೆದು ರಭಸದಿಂದ ಹರಿದು ಹೋದಳು. ಅವಳ ಆಳಕ್ಕಿಳಿಯುವುದು ಒತ್ತಟ್ಟಿಗಿರಲಿ, ಒಂದೇ ಒಂದು ಮೆಟ್ಟಿಲು ಇಳಿದು ನನ್ನ ಕಾಲುಗಳನ್ನು ತೊಯ್ಯಿಸಿಕೊಳ್ಳುವ ಸಾಮರ್ಥ್ಯ ಕೂಡ ಇಲ್ಲದವಳಂತೆ ಮೌನವಾಗಿ ಕುಳಿತೇ ಇದ್ದೆ.


**ನೀತಾ ರಾವ್**

ಲೇಖಕಿ ಬೆಳಗಾವಿಯವರು. ಎಂ.ಕಾಂ., ಪಿಎಚ್.ಡಿ. ಪದವೀಧರೆ. ಕೆಲಕಾಲ ಬ್ಯಾಂಕ್ ಉದ್ಯೋಗಿಯಾಗಿದ್ದ ಅವರು ಪ್ರಸ್ತುತ ಕಾಲೇಜು ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಪತ್ರಿಕೆಗಳಲ್ಲಿ ಲೇಖನಗಳು, ಪ್ರಬಂಧಗಳು, ಮತ್ತು ಕತೆಗಳು ಪ್ರಕಟವಾಗಿವೆ. 'ಅಂತಃಪುರ' (ಅಂಕಣ ಬರಹಗಳು) ಹಾಗೂ 'ಹತ್ತನೇ ಕ್ಲಾಸಿನ ಹುಡುಗಿಯರು' (ಲಲಿತ ಪ್ರಬಂಧಗಳು) – ಅವರ ಪ್ರಕಟಿತ ಪುಸ್ತಕಗಳಾಗಿವೆ.